( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

ದಿನಾಂಕ : **27/08/2018**

**ಅಸಲು ದಾವೆ. ನಂ. 199/2013**

( ಮುಂದುವರೆದ ಪಾಟೀ ಸವಾಲು ಎ.ಎಸ್.ಎಂ. ವಕೀಲರಿಂದ )

ನಿಪಿ-6 ರಲ್ಲಿ ದಾವಾ ಷೆಡ್ಯೂಲ್ ಸ್ವತ್ತು ಪ್ರತಿವಾದಿಯ ತಾಯಿಯವರ ಹೆಸರಿಗೆ ಹಿಸ್ಸೆ ಮೂಲಕ ಬಂದ ಸ್ವತ್ತು ಎಂದು ನಮುದಾಗಿದೆ ಎಂದರೆ ಸರಿ. ಆ ವಿಚಾರ ನನಗೆ ತಿಳಿದಿದ್ದರೂ ಸಹ ಈ ದಾವಾಗೆ ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಪ್ರತಿವಾದಿಯ ತಾಯಿ ದಾವಾ ಸ್ವತ್ತು ಒಳಗೊಂಡಂತೆ ಇತರೆ ಆಸ್ತಿಗಳನ್ನು ಕೇರಳಾ ಮೂಲದ ವ್ಯಕ್ತಿಗೆ ನೋಡಿಕೊಳ್ಳಲು ಬಿಟ್ಟಿದ್ದು ಅವರು ಬೆಂಗಳೂರಿನಲ್ಲಿ ವಾಸವಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಪ್ರತಿವಾದಿಯ ತಾಯಿ ಶೀಲ ಕೃಷ್ಣಮೂರ್ತಿಯವರ ವಿರುದ್ಧ ಯಾವುದೇ ದೂರನ್ನು ಪೊಲೀಸ್ ಠಾಣೆಗೆ ನೀಡಿಲ್ಲ. ನಾನು 3 ತಿಂಗಳ ಹಿಂದೆ ಶೀಲ ಕೃಷ್ಣಮೂರ್ತಿ ಮತ್ತು ಚೈತ್ರ ಎಂಬುವವರ ವಿರುದ್ಧ ದೂರು ನೀಡಿದ್ದೇನೆ ಎಂದರೆ ಸಾಕ್ಷಿಯು ಮುಂದುವರೆದು ತೊಂದರೆ ಕೊಡುತ್ತಿರುವ ಬಗ್ಗೆ ದೂರನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದೂರಿನಲ್ಲಿ ಪೊಲೀಸ್ ಠಾಣೆಗೆ ದೂರು ನೀಡಿದರು ಯಾವುದೇ ಪ್ರಯೋಜನವಾಗಿಲ್ಲ ಎಂದು ನಮೂದು ಮಾಡಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಮೂಲ ಸರ್ವೆ ನಂಬರ್ 37 ರಲ್ಲಿ ಯಾವ ದಿಕ್ಕಿಗೆ ನನಗೆ ಜಮೀನು ಮಂಜೂರಾಗಿದೆ ಎಂದುಎ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲು ಯಾವುದೇ ತೊಂದರೆ ಇಲ್ಲ. ನಾನು ದಾವಾ ಸ್ವತ್ತು ಮಂಜೂರಾದ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಯಾರ ಹೆಸರಿಗೆ ಮತ್ತು ಯಾವಾಗ ಮಂಜೂರಾಗಿದೆ ಎಂದು ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ಮರೀಹುಚ್ಚಯನ ಮಗ ಮರೀಹುಚ್ಚಯ್ಯ ಅಲ್ಲ ಎಂದರೆ ಸರಿ.

ಸಾಕ್ಷಿಗೆ ಸರ್ವೆ ನಂಃ 92 ಕ್ಕೆ ಸಂಬಂಧಿಸಿದಂತೆ 1980-81 ನೇ ಸಾಲಿನ ಪಹಣಿಯ ದೃಡೀಕೃತ ನಕಲನ್ನು ತೋರಿಸಲಾಗಿ ಅದರಲ್ಲಿ ಮರೀಹುಚ್ಚನ ಮಗ ಹುಚ್ಚ ಎಂದು ನಮೂದಾಗಿರುವುದನ್ನು ಸರಿ ಎಂದು ಒಪ್ಪಿರುತ್ತಾರೆ. ಸದರಿ ದಾಖಲೆಗಳನ್ನು ನಿಡಿ-3 ಎಂದು ಗುರುತಿಸಲಾಯಿತು.ಸಾಕ್ಷಿಗೆ ಸರ್ವೆ ನಂಃ 84 ಕ್ಕೆ ಸಂಬಂಧಿಸಿದಂತೆ 1991-92 ನೇ ಸಾಲಿನ ಪಹಣಿಯ ದೃಡೀಕೃತ ನಕಲನ್ನು ತೋರಿಸಲಾಗಿ ಅದರಲ್ಲಿ ಮರಿಯ ಬಿನ್ ಹುಚ್ಚ ಎಂದು ನಮೂದಾಗಿರುವುದನ್ನು ಸರಿ ಎಂದು ಒಪ್ಪಿರುತ್ತಾರೆ.ಸದರಿ ದಾಖಲೆಗಳನ್ನು ನಿಡಿ-4 ಎಂದು ಗುರುತಿಸಲಾಯಿತು.

ಸರ್ವೆ ನಂಃ63 ರಲ್ಲಿ ಒಟ್ಟು ಎಷ್ಟು ಎಕರೆ ಜಮೀನು ಇದೆ ಮತ್ತು ಎಷ್ಟು ಪೋಡುಗಳು ಇವೆ ಎಂದು ಹಾಗೂ ಯಾವ ಯಾವ ಪೋಡು ಯಾವ ಯಾವ ದಿಕ್ಕಿಗೆ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ಆದ್ದರಿಂದ ಸರ್ವೆ ನಂಃ63 ರಲ್ಲಿನ ಪೋಡುಗಳ ನಿಖರವಾದ ಚೆಕ್ಕು ಬಂದಿಯನ್ನು ಹೇಳಲು ಬರುವುದಿಲ್ಲ ಎಂದರೆ ಸರಿ.

ದಾವಾ ಸ್ವತ್ತದ  ಸರ್ವೆ ನಂಃ63/1 ಸಿ ಯಾವ ಚೆಕ್ಕು ಬಂದಿಯಲ್ಲಿ  ಬರುತ್ತದೆ ಎಂದು ತೋರಿಸಲು ನಾನು ಯಾವುದೆ ರೆವಿನ್ಯೂ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

ವಾದ ಪತ್ರದ 4 ನೇ ಖಂಡಿಕೆಯಲ್ಲಿ 2 ನೇ ವಾದಿಯು ಸಲ್ಲಿಸಿದ್ದ ಆರ್.ಆರ್.ಟಿ. ನಂಃ 12/2006-07 ರ ಆದೇಶದ ವಿರುದ್ಧ ಪ್ರತಿವಾದಿಯು ಮೇಲ್ಮನವಿಯನ್ನು ಸಲ್ಲಿಸಿದ್ದು ಆರ್.ಎ.ನಂಃ21/2007-08 ಸಲ್ಲಿಸಿದ್ದರು ಎಂದು ನಮೂದಾಗಿದೆ ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ಜಮೀನಿನ ಖಾತೆಯನ್ನು ರದ್ದು ಪಡಿಸಿ ಪುನಃ ವಿಚಾರಣೆ ಕೈಗೊಳ್ಳುವಂತೆ ಆದೇಶ ಮಾಡಿದ್ದರು ಎಂದರೆ ಸರಿ. ಸದರಿ ಆದೇಶದಂತೆ ತಹಶೀಲ್ದಾರವರ ಕಚೇರಿಯಲ್ಲಿ ವಿಚಾರಣೆ ಮಾಡಿ ವರದಿಯನ್ನು ಎ.ಸಿ.ಯವರ ಕಚೇರಿಗೆ ಕಳುಹಿಸಿಕೊಟ್ಟಿಲ್ಲ ಎಂದರೆ ಸರಿಯಲ್ಲ. ತಹಶೀಲ್ದಾರವರು ಎ.ಸಿ. ಆದೇಶದಂತೆ ವಿಚಾರಣೆ ಕಾಪಿ ಕಳುಹಿಸದೇ ತಾವೇ ವಿಚಾರಣೆ ಕೈಗೊಂಡು ಕಾನೂನು ಬಾಹಿರವಾಗಿ ಆದೇಶ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆದೇಶದ ವಿರುದ್ಧ ಪ್ರತಿವಾದಿಯು ತಮ್ಮ ಜೀವಿತಾವಧಿಯಲ್ಲಿ ಮೇಲ್ಮನವಿಯನ್ನು ಸಲ್ಲಿಸಿ ಅದು ಈಗಲೂ ಸಹ ಎ.ಸಿ. ಕಚೇರಿಯಲ್ಲಿ  ಬಾಕಿ ಇದೆ ಎಂದರೆ ಸರಿ.

ಕೆಲವು ಸ್ವತ್ತುಗಳು ನಮ್ಮ ಕುಟುಂಬಕ್ಕೆ ಮಂಜೂರಾಗಿದೆ ಎಂದು ಅಸಲು ದಾವಾ ಸಂಖ್ಯೆ:321/2017 ರೀತ್ಯಾ ಸಚಿನ್‌ಮೂರ್ತಿ ಎಂಬುವವರ ವಿರುದ್ಧ 2 ನೇ ಅಧಿಕ ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ. ಶಿರಧನಹಳ್ಳಿ ಗ್ರಾಮದಲ್ಲಿ ನಮ್ಮ ಕುಟುಂಬಕ್ಕೆ ಮಂಜೂರಾಗಿರುವ ಜಮೀನಿನ ಸಂಬಂಧ ಎಸ್.ಬಿ. ಚೆನ್ನೇಗೌಡ ಮತ್ತು ಇತರರ ವಿರುದ್ಧ ಪಿ.ಟಿ.ಸಿ.ಎಲ್. ಕಾಯ್ದೆ  ಅನ್ವಯ ವ್ಯಾಜ್ಯವನ್ನು ಹೂಡಿರುತ್ತೇವೆ ಎಂದರೆ ಸರಿ. ನಮ್ಮ ಒಟ್ಟು ಕುಟುಂಬದಲ್ಲಿ ಇಲ್ಲಿಯವರೆಗೆ ವಿಭಾಗವಾಗಿಲ್ಲ. ನನ್ನ ತಾತ ಅವರ ಅಣ್ಣತಮ್ಮಂದಿರ ಕಾಲದಿಂದಲೂ ಸಹ ಒಟ್ಟು ಕುಟುಂಬದಲ್ಲಿ ಯಾವುದೇ ವಿಭಾಗವಾಗಿಲ್ಲ.

ಸರ್ವೆ ನಂಃ 37/2 ರಲ್ಲಿ ಅದರ  ಮೂಲ ಮಾಲೀಕರಾದ ಶೆಟ್ಟಯ್ಯನವರ ಮಗ್ಗ ಹುಚ್ಚರವರಿಂದ 1965 ನೇ ಸಾಲಿನಲ್ಲಿ  ಎಂ.ಸಿ. ಬಸವೇಗೌಡರವರು 2 ಎಕರೆ ಜಮೀನನ್ನು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಸರ್ವೆ ನಂಃ 37 ರಲ್ಲಿ 4 ಎಕರೆ ಜಮೀನನ್ನು ಹುಚ್ಚಯ್ಯನ ಮಗ ಲಕ್ಕಯ್ಯನವರಿಂದ 1965 ನೇ ಸಾಲಿನಲ್ಲಿ ರಲ್ಲಿ  ಎಂ.ಸಿ. ಬಸವೇಗೌಡರವರು  ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ.  ಒಟ್ಟು 6 ಎಕರೆ ಜಮೀನನ್ನು ಎಂ.ಸಿ. ಬಸವೇಗೌಡರವರು 1972 ರಲ್ಲಿ ಕೇಶವೇಗೌಡರ ಮಗ ಸುಬ್ಬೇಗೌಡರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.  ಸದರಿ ಎ.ಕೆ. ಸುಬ್ಬೇಗೌಡರವರು 1979 ನೇಸಾಲಿನಲ್ಲಿ ಪ್ರತಿವಾದಿಯ ತಂದೆಯಾಗಿ ಜಿ.ಟಿ. ಕೃಷ್ಣಮೂರ್ತಿಯವರಿಗೆ  4 ಎಕರೆ ಜಮೀನನ್ನು  ಮಾರಾಟ ಮಾಡಿ ಸ್ವಾಧೀನ ವಹಿಸಿಕೊಟ್ಟಿದ್ದರು ಎಂದರೆ ಸರಿಯಲ್ಲ. ಅದೇ ದಿನ ಉಳಿಕೆ 2 ಎಕರೆ ಜಮೀನನ್ನು ಪ್ರತಿವಾದಿಯ ತಂದೆಗೆ ಇನ್ನೊಂದು ಕ್ರಯ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅಂದಿನಿಂದ ಇಲ್ಲಿಯವರೆಗೆ ಜಿ.ಟಿ. ಕೃಷ್ಣಮೂರ್ತಿಯವರ ಕುಟುಂಬಸ್ಥರು  ಸದರಿ ಸ್ವತ್ತುಗಳ ಹಕ್ಕು ಮತ್ತು ಸ್ವಾಧೀನವನ್ನು ಹೊಂದಿರುತ್ತಾರೆ ಎಂದರೆ ಸರಿಯಲ್ಲ.

ಅಸಲು ದಾವಾ ಸಂಖ್ಯೆ:80/2010 ರಲ್ಲಿ ನಮ್ಮ ಸ್ವತ್ತು ಎಲ್ಲಿ ಬರುತ್ತದೆ ಎಂದು ಗೊತ್ತಿಲ್ಲ ಎಂದು ನಮ್ಮ ತಾಯಿಯವರು ಒಪ್ಪಿಕೊಂಡಿದ್ದರೂ ಸಹ ಪ್ರತಿವಾದಿ ಕುಟುಂಬದವರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆಯನ್ನು ಹೂಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಪರಿಹಾರ ಪಡೆಯಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಶೀಲಕೃಷ್ಣಮೂರ್ತಿಯವರು ಹಕ್ಕು ಸ್ವಾಧೀನದಲ್ಲಿ ಇದ್ದರೂ ಸಹ ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲದೇ ಇರುವುದರಿಂದ ಈ ದಾವೆಯ ಅನೂರ್ಜಿತವಾಗುತ್ತದೆ ಎಂದರೆ ಸರಿಯಲ್ಲ.

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ,ಅರಕಲಗೂಡು.